ಎಲ್ಲರೂ ನಿಗದಿತ ಸಮಯಕ್ಕೆ ಮಾಯಣ್ಣನ ಕೋಣೆಯಲ್ಲಿ ಉಪಸ್ಥಿತರಾಗಿದ್ದರು. ಠಾಣೆಯ ಒಳಗೆ ಹಿಂದಿನ ಕೋಣೆಗಳಲ್ಲಿ ಶಂಕಿತರನ್ನು ಪ್ರತ್ಯೇಕವಾಗಿ ಕುಳ್ಳಿರಿಸಿ, ಪೇದೆ ಕಾಟಯ್ಯ, ಜಾಹ್ನವಿಗೆ ಮಾತ್ರ ಠಾಣೆಯ ಹೊರಗೆ ತನ್ನ ಕಾರಿನಲ್ಲಿ ಕೂತು ಕಾಯಲು ಸೂಚಿಸಲಾಗಿತ್ತು. ಪೇದೆ ರಂಗಯ್ಯನಿಗೆ ಠಾಣೆಯ ಹೊರಗಿನ ಮತ್ತು ಇತರೆ ಜವಾಬ್ದಾರಿಗಳ ಉಸ್ತುವಾರಿ ವಹಿಸಲಾಗಿತ್ತು. ಕಾಫಿ ಬಿಸ್ಕತ್ತುಗಳ ಸಮಾರಾಧನೆಯ ನಂತರ ಕೌತುಕ ಮಡುಗಟ್ಟಿದ್ದ ಕಾರ್ಯಕ್ರಮಕ್ಕೆ ಮಾಯಣ್ಣ ಚಾಲನೆ ಕೊಟ್ಟಿದ್ದ.

'ಕಾಟಯ್ಯ, ಚಂದ್ರನ್ ಅವರನ್ನು ಕಳಿಸಿ...'

ಚಂದ್ರನ್ ಕೋಣೆಯನ್ನು ಪ್ರವೇಶಿಸಿ ಎಲ್ಲರಿಗೂ ನಮಸ್ಕರಿಸುವಂತೆ ತುಸು ತಲೆಬಾಗಿ ಕೈಕಟ್ಟಿ ನಿಂತ.

ಮಾಯಣ್ಣ ಎಸ್‌ಪಿ ಸಾಹೇಬರನ್ನ ಉದ್ದೇಶಿಸಿದಂತೆ– 'ಸರ್ ಈತ, ಅಮ್ಮು ಅವರ ತಂದೆ ಲೇಟ್ ಕ್ಯಾಪ್ಟನ್ ಮುತ್ತಣ್ಣನವರ ತುಕಡಿಯಲ್ಲಿದ್ದ ಸಿಪಾಯಿ. ಒಂದು ಟೆರರಿಸ್ಟ್ ಕೋಂಬಿಂಗ್ ಆಪರೇಷನ್‌ನಲ್ಲಿ ಕ್ಯಾಪ್ಟನ್, ತಮ್ಮ ಸುರಕ್ಷತೆಯನ್ನೂ ಲೆಕ್ಕಿಸದೆ ಈತನನ್ನು ಪ್ರಾಣಾಪಾಯದಿಂದ ಬಚಾವ್ ಮಾಡುದ್ರೂ ಅನ್ನೋ ನಿಷ್ಠೆಯಲ್ಲಿ, ನಿವೃತ್ತಿಯ ನಂತರ, ಅವರ ಎಸ್ಟೇಟಲ್ಲೇ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿದೆ ಅಂತ ಹೇಳ್ತಾರೆ. ಅಮ್ಮು ಅವರ ಎಸ್ಟೇಟಿನ ಈ ವರ್ಷದ ಕಿತ್ತಳೆ ಫಸಲಿನ ಗುತ್ತಿಗೆ ಹಣ ಹದಿನೈದು ಲಕ್ಷವನ್ನು, ಗುತ್ತಿಗೆದಾರ ರಿಯಾಜ್ ಹತ್ತಿರ ತಗೊಂಡು ಅಮ್ಮು ಅವರಿಗೆ ಕೊಟ್ಟೆ ಅಂತಾರೆ. ಕೊಟ್ಟಿರೋದಕ್ಕೆ ಏನೂ ಪ್ರೂಫ್ ಇಲ್ಲ, ಎಸ್ಟೇಟ್ ಲೆಕ್ಕದ ಪುಸ್ತಕದಲ್ಲಿ ಎಂಟರ್ ಆಗಿಲ್ಲ, ಅಮ್ಮು ಮನೇಲಿ ಆ ಕ್ಯಾಶ್ ರಿಕವರ್ ಆಗಿಲ್ಲ, ಅದೇ ಟೈಮಲ್ಲಿ ಮಗನ ಬಿಸಿನೆಸ್ ಮತ್ತು ಮದುವೆಗೆ ಅಂತ ಇಪ್ಪತ್ತು ಲಕ್ಷದವರೆಗೆ ಖರ್ಚು ಮಾಡಿದ್ದಾರೆ. ಆ ಹಣ ಬೇರೆ ಎಲ್ಲಿಂದ ಬಂತು ಅನ್ನೋದಕ್ಕೆ ಸರಿಯಾದ ಪುರಾವೆ ಇಲ್ಲ. ರಿಯಾಜ್, ಈ ವರ್ಷ ಜೋರಾಗಿ ಮಳೆ ಆಗಿ ಮರದಲ್ಲಿ ಅರ್ಧಾನೂ ಕಾಯಿ ಕಚ್ಚಿಲ್ಲ, ಸ್ವಲ್ಪ ಹಣ ವಾಪಸ್ ಮಾಡಿ, ಇಲ್ಲಾ ಅಂದ್ರೆ ಅಮ್ಮು ಅವರ ಹತ್ತಿರ ಕೇಳ್ತೀನಿ ಅಂದಿದ್ದಕ್ಕೆ ಕಟ್ಟಿಗೆ ತಗೊಂಡು ಅವನ ಮೇಲೆ ಹಲ್ಲೆ ಮಾಡಿದ್ದಾರೆ. ಕಿತ್ತಳೆಯ ವಾರ್ಷಿಕ ಕಾಂಟ್ರಾಕ್ಟ್ ಹಣ ಹದಿನೈದು ಲಕ್ಷ ರೂಪಾಯಿ ಲಪಟಾಯಿಸಿ, ತನ್ನಲ್ಲೇ ಇಟ್ಕೊಂಡು, ಅಮ್ಮು ಅವರು ಅದನ್ನು ಕೆದಕುವುದಕ್ಕೆ ಮುಂಚೆ ಅವರನ್ನ ಸೈಲೆಂಟ್ ಮಾಡ್ಬಿಟ್ರಾ ಅನ್ನೋ ಅನುಮಾನ ಬಂತು. ಅಲ್ಲದೆ ಅಮ್ಮು ಕೊಲೆಯಾದ ದಿನ ಮತ್ತು ಸಮಯದಲ್ಲಿ ಅಮ್ಮು ಮನೆ ಮುಂದೇನೇ ಇದ್ದರು ಇವರು. ಎಸ್ಟೇಟಿನ ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದೆ, ಮಾರ್ಕೆಟ್ಟಲ್ಲಿ ಕೆಲಸ ಮುಗಿಸಿ, ಅಮ್ಮು ಮನೆಯ ಮೂಲೆತನಕ ಬಂದು, ಆಮೇಲೆ ಲೇಟಾಗುತ್ತೆ ಅಂತ, ಅಮ್ಮು ಅವರ ಮನೆಗೆ ಹೋಗದೆ, ವಾಪಸ್ ಎಸ್ಟೇಟಿಗೆ ಹೊರಟೋದೆ ಅಂತಾರೆ. ಅದು ಸ್ವಲ್ಪ ವಿಚಿತ್ರವಾಗಿದೆ. ಈ ಎಲ್ಲಾ ಕಾರಣಕ್ಕೆ ಇವರನ್ನು ಶಂಕಿತರ ಪಟ್ಟೀಲಿ ಸೇರುಸ್ಕೊಂಡು ಈ ದಿಕ್ಕಿನಲ್ಲಿ ತನಿಖೆ ಮಾಡಿದ್ದೀವಿ ಸರ್'.

'ಎಷ್ಟು ವರ್ಷದಿಂದ ಮ್ಯಾನೇಜರ್ ಆಗಿ ಕೆಲಸ ಮಾಡ್ತಿದ್ದೀರ?'

ಎಸ್.ಪಿ. ಸಾಹೇಬರ ಪ್ರಶ್ನೆ.

'ನಾಲ್ಕು ವರ್ಷ'.

'ಎಕ್ಸ್ ಸರ್ವೀಸ್‌ಮನ್ ಅನ್ನೋ ರಿಯಾಯಿತಿ ಇಲ್ಲದ ಹಾಗೆ ಟ್ರೀಟ್ಮೆಂಟ್ ಆಗುತ್ತೆ ಇಲ್ಲಿ... ಎಚ್ಚರವಿರಲಿ'.

ಎಸ್.ಪಿ. ಸಾಹೇಬರ ಎಚ್ಚರಿಕೆ ಯಾವ ಪರಿಣಾಮವೂ ಮಾಡಿದಂತಿರಲಿಲ್ಲ ಚಂದ್ರನ್ ಮೇಲೆ. ಮಾಯಣ್ಣನ ಸೂಚನೆಯ ಮೇರೆಗೆ ಕಾಟಯ್ಯ ಚಂದ್ರನ್ ಅನ್ನು ವಾಪಸ್ ಕರೆದುಕೊಂಡು ಹೋದ.

'ಕಾಟಯ್ಯ, ರವೀನ ಕಳಿಸಿ'.

ಸಾಕಷ್ಟು ಕುಗ್ಗಿದಂತಿದ್ದ ರವಿ ಮೆಲ್ಲಗೆ ಒಳಬಂದು ನಿಂತಿದ್ದ.

'ಸರ್, ಈತ ರವಿ ಅಂತ, ಅಮ್ಮು ಅವರ ಮಲತಾಯಿ ವಿಜಯಮ್ಮನವರ ತಮ್ಮ, ಅಲ್ಲೇ ಎಸ್ಟೇಟಲ್ಲೇ ವಾಸ. ಮೂಲತಃ ಇವನೊಬ್ಬ ಕ್ರಿಮಿನಲ್. ಏನೂ ಕೆಲಸ ಇಲ್ಲ. ಎಲ್ಲಾ ಚಟಗಳೂ ಇವೆ. ಅಲ್ಲಿ ಪೋಲಿ ಹುಡುಗರ ಗುಂಪು ಕಟ್ಟಿ ಗಲಾಟೆಗಳು ಮಾಡ್ತಿರ್ತಾನೆ. ಎಸ್ಟೇಟ್ ಹಿಂದಿನ ಕಾಡು ಸವರಿ ಗಾಂಜಾ ಗಿಡಗಳ ಕಲ್ಟಿವೇಷನ್ ಮಾಡ್ತಾನೆ. ಇಲ್ಲಿನ ಲೋಕಲ್ ರಿಟೇಲ್ ಗಾಂಜಾ ಪೆಡ್ಲರ್ಸ್‌ಗೆ ಈತನದೇ ಹಂಚಿಕೆ ಪೂರೈಕೆ ಎಲ್ಲಾನೂ. ಇದೆಲ್ಲಾ ಅಮ್ಮುಗೆ ತಿಳಿದು, ಇದು ಮುಂದುವರಿದರೆ ಪೊಲೀಸರಿಗೆ ದೂರು ಕೊಡ್ತೀನಿ ಅಂತ ಅಂತಿಮ ಎಚ್ಚರಿಕೆ ಕೊಟ್ಟಿದ್ದಾರೆ. ಎಲ್ಲಿ ಈ ಲಕ್ಷ ಲಕ್ಷದ ಆದಾಯಕ್ಕೆ ಅಮ್ಮುಯಿಂದ ಕಲ್ಲು ಬೀಳುತ್ತೋ ಅಂತ ಹೆದರಿ ಕಂಗಾಲಾಗಿದ್ದಾನೆ. ಅಲ್ಲಿ, ಅಮ್ಮು ಜೊತೆ ನನಗೆ ಮದುವೆ ಆಗಿದೆ ಅಂತ ಸುದ್ದಿ ಮಾಡಿ, ಎಸ್ಟೇಟಿನ ಒಂದು ಭಾಗಾನ ಪರಭಾರೆ ಮಾಡೋದಕ್ಕೆ ಪ್ರಯತ್ನ ಮಾಡಿ, ಅಮ್ಮು ಅವರ ಕೈಯಲ್ಲಿ ಸಿಕ್ಕಾಕಿಕೊಂಡು ಎಲ್ಲರ ಮುಂದೆ ಛೀಮಾರಿ ಹಾಕಿಸಿಕೊಂಡು ಅಪಮಾನಿತನಾಗಿದ್ದಾನೆ. ಅಮ್ಮು ಜೊತೆ ದೇವಸ್ಥಾನದಲ್ಲಿ ಮದುವೆ ಆದ ಹಾಗೆ, ಅಮ್ಮು ಇವನ ಪರವಾಗಿ ವಿಲ್ ಮಾಡಿರೊ ಹಾಗೆ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದಾನೆ. ಹೀಗೆ ಇವನಿಗೆ ದೂರ ದೂರದ ದುಷ್ಟ ಉದ್ದೇಶಗಳೂ ಇವೆ. ಎಲ್ಲದಕ್ಕೂ ಸಾಕ್ಷಿ ಇದೆ ಸರ್. ಅಲ್ಲದೆ ಈತ ಅಮ್ಮು ಕೊಲೆಯಾದ ದಿನ ಮತ್ತು ಸಮಯದಲ್ಲಿ ಅಮ್ಮು ಮನೆ ಹತ್ತಿರ ಇದ್ದೆ ಅಂತ ಒಪ್ಪಿಕೊಂಡಿದ್ದಾನೆ. ಆದ್ದರಿಂದ ಇವನು ಈ ಕೊಲೆ ಪ್ರಕರಣದಲ್ಲಿ ಮುಖ್ಯ ಆರೋಪಿ ಸರ್'.

ಇಷ್ಟನ್ನೂ ಕೇಳಿಸಿಕೊಂಡ ಎಸ್.ಪಿ. ಸಾಹೇಬರು,

'ಇವನಿಗೆ ಸ್ಟ್ರಾಂಗ್ ಮೋಟಿವ್ ಇದೆ. ಇವನನ್ನ ಆ ಪೀಸಿ ರಂಗಯ್ಯನ ಬಿಟ್ಟು ಚೆನ್ನಾಗಿ ವರ್ಕ್ ಮಾಡಿ ಬಾಯಿ ಬಿಡಿಸಿ'.

'ಯೆಸ್ ಸಾರ್. ಕಾಟಯ್ಯ ಇವನನ್ನ ಕರ್ಕೊಂಡೋಗಿ ಆ ದಿನೇಶನ್ನ ಕಳಿಸಿ'.

ಒಳಬಂದ ದಿನೇಶ್ ಅತ್ತಿತ್ತ ನೋಡಿ ಯಾವುದೂ ಖಾಲಿ ಕುರ್ಚಿ ಕಾಣದೆ ಹಾಗೆ ಕೈಕಟ್ಟಿ ನಿಂತ. ಮಾಯಣ್ಣ ಮುಂದುವರಿಸಿದ.

'ಸರ್, ಈತ ಟೀವಿ ಧಾರಾವಾಹಿ ನಿರ್ದೇಶಕ. ಹೆಣ್ಣುಬಾಕ, ಲಂಪಟ, ಮ್ಯಾನಿಪ್ಯುಲೇಟರ್ ಅನ್ನೋ ಇಮೇಜ್ ಇದೆ. ಈ ಅಮ್ಮು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಅವರ ಅಪಾರವಾದ ಆಸ್ತಿಯ ಮೇಲೆ ಕಣ್ಣಿಟ್ಟು, ಕುತಂತ್ರಗಳಿಂದ, ಅವರು ಪ್ರೀತಿಯಲ್ಲಿದ್ದ ಹುಡುಗ ಜಯಂತನಿಂದ ದೂರ ಮಾಡಿ, ತಾನು ಹತ್ತಿರ ಆಗೋದಕ್ಕೆ ನೋಡಿದ್ದಾನೆ. ಅಷ್ಟೇ ಅಲ್ಲದೆ ಅವರಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ. ಇವನ ಎಲ್ಲಾ ಹುನ್ನಾರ ಅಮ್ಮುಗೆ ಅರ್ಥ ಆಗಿ, ಅವರು ಇವನಿಗೆ ಉಗಿದು ಕಪಾಳಕ್ಕೆ ಹೊಡೆದಿದ್ದಾರೆ. ಅಮ್ಮು ಕೊಲೆಯಾದ ಮಾರನೇ ದಿನ, ಪ್ರೆಸ್ ಮೀಟ್ ಕರೆದು ಇವನ ಕೇಡುಬುದ್ಧಿಯನ್ನು ಬಯಲು ಮಾಡಿ, ಪೊಲೀಸು ಕಂಪ್ಲೇಂಟ್ ಕೊಡುವುದಾಗಿ ನೇರವಾಗಿ ಹೇಳಿದ್ದಾರೆ. ಇವನು ಅದರಿಂದ ಅಪಮಾನಿತನಾಗಿದ್ದಾನೆ, ಹೆದರಿದ್ದಾನೆ. ಹೀಗೆ ಟೀವಿ, ಸಿನಿಮಾಗಳಲ್ಲಿ ಅವಕಾಶ ಮಾಡಿಕೊಟ್ಟಿರುವ ತನಗೆ ಕೃತಜ್ಞತೆಯಿಂದ ಸಹಕರಿಸುವುದರ ಬದಲು, ಎದುರುಬಿದ್ದು ತನ್ನನ್ನು ಬೆತ್ತಲಾಗಿಸಿ ಸರ್ವನಾಶ ಮಾಡಲು ನಿಂತಿದ್ದಾಳೆ ಎಂದು ಬಗೆದು ಅಮ್ಮೂನ ಮುಗಿಸಿದ್ದಾನೆ ಅಂತ ಅನುಮಾನ ಸರ್. ಇವನು ಅಮ್ಮು ಕೊಲೆಯಾದ ದಿನ ಮತ್ತು ಸಮಯದಲ್ಲಿ ಅಮ್ಮು ಮನೆ ಹತ್ತಿರಾನೇ ವಾಕಿಂಗ್ ಮಾಡ್ತಿದ್ದೆ ಅಂತಾನೆ. ಅಲ್ಲದೆ ಅಮ್ಮು ಮನೆಗೆ ಹಿಂಬದಿಯಿಂದ ಪ್ರವೇಶಿಸುವುದು ಇವನಿಗೆ ಗೊತ್ತಿದೆ ಸರ್'.

'ಮಾಯಣ್ಣ ಯಾವ ಮುಲಾಜು ಇಲ್ಲದೆ ನಿಮಗೆ ಗೊತ್ತಿರುವ ಎಲ್ಲಾ ವಿಧಾನಗಳನ್ನು ಉಪಯೋಗಿಸಿ, ಟಿಲ್ ಕನ್‌ಫೆಷನ್ ಅಂಡ್ ಕನ್‌ಕ್ಲೂಷನ್'.

'ಯೆಸ್ ಸಾರ್. ಕಾಟಯ್ಯ ಇವನನ್ನ ಎಳಕೊಂಡೋಗಿ, ಹಾಗೆ ಆ ಜಯಂತನ ಕಳಿಸಿ...'

ಜಯಂತ್ ಯಾವುದೋ ಕೆಲಸದ ಸಂದರ್ಶನಕ್ಕೆ ಬಂದಂತೆ ಕ್ಯಾಶುವಲ್ಲಾಗಿ ಬಂದು ನಿಂತ.

'ಸರ್, ಈತ ಜಯಂತ್... ಅಮ್ಮು ಮತ್ತು ಈತ ಪರಸ್ಪರ ಇಷ್ಟಪಟ್ಟು, ಮದುವೇನೂ ಆಗಬೇಕು ಅಂತ ಇದ್ದವರು... ಈತನಿಗೆ ಮುಂದಕ್ಕೂ ಅಮ್ಮು ಆ್ಯಕ್ಟಿಂಗ್‌ನಲ್ಲಿ ಕಂಟಿನ್ಯೂ ಮಾಡೋದು ಇಷ್ಟ ಇರಲಿಲ್ಲ. ಆದರೆ ಇವನನ್ನ ಧಿಕ್ಕರಿಸುವ ರೀತಿಯಲ್ಲಿ ಟೀವಿಯಷ್ಟೇ ಅಲ್ಲದೆ ಸಿನಿಮಾದಲ್ಲಿ ಕೂಡ ಆ್ಯಕ್ಟ್ ಮಾಡಲು ಅಮ್ಮು ಸಹಿ ಹಾಕಿದ್ದಳು. ಜೊತೆಗೆ ಈರ್ವರ ನಡುವಿನ ಸಂಬಂಧ ಹಳಸಿದ ನಂತರದಲ್ಲಿ, ಅಮ್ಮು ದಿನೇಶನ ಜೊತೆ ಸಹಜೀವನ ನಡೆಸುತ್ತಿದ್ದಾಳೆ ಅಂತ ಇವನು ಭಾವಿಸಿದ್ದ. ಆದರೆ ಇವನು ಆ ರೀತಿ ಭಾವಿಸುವಂತೆ ದಿನೇಶ್ ಮ್ಯಾನಿಪುಲೇಟ್ ಮಾಡಿದ್ದ. ದಿಸ್ ಫೆಲೊ ಈಸಿಲಿ ಪ್ಲೇಡ್ ಇಂಟು ಹಿಸ್ ಹ್ಯಾಂಡ್ಸ್. ಜಯಂತ್ ಇದರ ಬಗ್ಗೆ ತುಂಬಾ ಅಪ್ಸೆಟ್ ಆಗಿದ್ದ. ಇವೆಲ್ಲದರ ಬಗ್ಗೆ ಇಬ್ಬರಿಗೂ ಸುಮಾರು ತಿಂಗಳುಗಳಿಂದ ಬಗೆಹರಿಯದ ಜಗಳ ಜಟಾಪಟಿ ನಡೀತಾನೇ ಇತ್ತು. ಇವರಿಬ್ಬರ ನಡುವೆ ಇನ್ನೇನು ಉಳಿದಿಲ್ಲ ಅನ್ನುವ ಘಟ್ಟಕ್ಕೆ ಬಂದು ನಿಂತಿತ್ತು ಇವರ ಸಂಬಂಧ. ಕೊಲೆ ನಡೆದ ದಿನ ಮತ್ತು ಸಮಯದಲ್ಲಿ ಅಮ್ಮು ಅವರ ಜೊತೆ ಇದ್ದ ಕೊನೆಯ ವ್ಯಕ್ತಿ ಇವನೇ'.

'ಅಲ್ಲಾರಿ... ಇಬ್ಬರ ಮಧ್ಯೆ ಬಿಟ್ಹೋಯ್ತು ಅಂದ್ಮೇಲೆ ಇವನ್ಯಾಕೆ ಮತ್ತೆ ಅಲ್ಹೋಗಿದ್ದ?'